MR. SPEAKER:- You can consider that.

ಡಾ. ಎಚ್.ಸಿ. ಮಹದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಪ್ರಯತ್ನಗಳನ್ನು ಕೂಡ ನಾವು ಮಾಡಿದ್ದೇವೆ. ಲೋಕಸೇವಾ ಆಯೋಗದ ಅಧ್ಯಕ್ಷರ ಜತೆಯಲ್ಲಿ ನಾನು ಮಾತನಾಡಿದ್ದೇನೆ. ಆದರೆ ನ್ಯಾಯಾಲಯ ಅತ್ಯಂತ ಬಿಗಿಯಾದಂಥ ಕ್ರಮವನ್ನು ತೆಗೆದುಕೊಂಡಮೇಲೆ ಅಧಿಕಾರಿಗಳು ಇದನ್ನು ಕೊಡುವುದಕ್ಕೆ ಸ್ವಲ್ಪ ಹೆದರುತ್ತಿದ್ದಾರೆ. ಆದರೂ ಸಮಸ್ಯೆಯ ತೀವ್ರತೆಯನ್ನು ಅರ್ಥಮಾಡಿಕೊಂಡು ಎಲ್ಲಾ ಪ್ರಯತ್ನವನ್ನು ಕೂಡ ಮಾಡಿದ್ದೇವೆ.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದುದು, ಡಾಕ್ಟರ್ ಆಗುವುದಕ್ಕೆ ಅರ್ಹತೆ ಇರುತ್ತದೆ. Particular category ಬರುವುದಕ್ಕೆ whether he is qualified or not ಎಂಬುದಕ್ಕೆ ಸಂಬಂಧಪಟ್ಟಹಾಗೆ provisional appointment ಕೊಡಿ. Supposing he does not fit into that category, you remove him. You can consider that proposal. You can discuss with Officers and come back.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಅಧ್ಯಕ್ಷರೇ, ಜನರಲ್ ಮೆರಿಟ್‌ಗೆ ವೆರಿಫಿಕೇಷನ್ ಇಲ್ಲದೇ ಕೊಡಬಹುದು.

ಅಧ್ಯಕ್ಷರು:- ಜನರಲ್ ಮೆರಿಟ್‌ಗೆ ಏನೂ ವೆರಿಫಿಕೇಷನ್ ಇಲ್ಲ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್:- ಅದನ್ನಾದರೂ ಮಾಡಬಹುದಲ್ಲಾ?

ಶ್ರೀ ಎಚ್.ಸಿ. ಮಹದೇವಪ್ಪ:- ಆದರೆ ಸೀನಿಯಾರಿಟಿ ಹೋಗುತ್ತದೆ ಎಂದು ಬೇರೆಯವರು ಅಬ್ಜೆಕ್ಟ್ ಮಾಡುತ್ತಾರೆ. ಎಲ್ಲಾ ವಿಚಾರಗಳನ್ನು ನಾನು ಚರ್ಚೆ ಮಾಡಿದ್ದೇನೆ.

MR. SPEAKER:- You may kindly discuss with your Officers.

ವಿಷಯ:- ಕೊಳವೆಬಾವಿ ಕೊರೆಯುವ ಯಂತ್ರಗಳ ದುರಸ್ತಿ.

6(142)

ಶ್ರೀ ಹೆಚ್. ಶಿವಪ್ಪ (ಹರಿಹರ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಭಾಗದಲ್ಲಿರುವ ಒಟ್ಟು ಕೊಳವೆಬಾವಿ ಕೊರೆಯುವ ಯಂತ್ರಗಳೆಷ್ಟು ಹಾಗೂ ಕೆಟ್ಟುನಿಂತಿರುವ ಯಂತ್ರಗಳೆಷ್ಟು;

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ವಿಫಲವಾದ ಬಾವಿಗಳೆಷ್ಟು ಮತ್ತು ದುಸ್ಥಿತಿಯಲ್ಲಿರುವ ಬಾವಿಗಳೆಷ್ಟು;

(ಕಳೆದ ಮೂರು ವರ್ಷಗಳ ವಿವರ ನೀಡುವುದು)

ಇ) ಕೆಟ್ಟು ನಿಂತಿರುವ ಯಂತ್ರಗಳನ್ನು ದುರಸ್ತಿಪಡಿಸದಿರಲು ಕಾರಣಗಳೇನು? ಇದರಿಂದಾಗುವ ಹಾನಿಗೆ ಕಾರಣಕರ್ತರಾದವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು):-

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಲಯದಲ್ಲಿ ಒಟ್ಟು 71 ಕೊಳವೆಬಾವಿ ಕೊರೆಯುವ ಯಂತ್ರಗಳು ಇರುತ್ತದೆ. ಇದರಲ್ಲಿ 13 ರಿಗ್ ಯಂತ್ರಗಳು ದುರಸ್ತಿಯಲ್ಲಿವೆ.

ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ವಿವರ ಈ ಕೆಳಗಿನಂತಿವೆ.

ವರ್ಷ	ಕೊರೆದಿರುವ ಕೊಳವೆ ಬಾವಿಗಳು	ವಿಫಲವಾದ ಕೊಳವೆ ಬಾವಿಗಳು	ದುಸ್ಥಿತಿಯಲ್ಲಿ (ದುರಸ್ತಿಯಲ್ಲಿ) ಇರುವ ಕೊಳವೆ ಬಾವಿಗಳು (ದಿನಾಂಕದಂದು)	
93-94	7224	609	2052	31-3-94
94-95	7228	489	2282	31-3-95
95-96	8874	678	3035	31-3-96

ಇ) ಕೆಟ್ಟು ನಿಂತಿರುವ ರಿಗ್ ಯಂತ್ರಗಳನ್ನು ದುರಸ್ತಿಪಡಿಸಲು ಸೂಕ್ತ ಕ್ರಮಗಳನ್ನು ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗುತ್ತಿದೆ. ದುರಸ್ತಿಗಳು ಬಹುತೇಕ ದೊಡ್ಡ ಪ್ರಮಾಣದ ದುರಸ್ತಿಗಳಾಗಿದ್ದು ತಾಂತ್ರಿಕ:ಆರ್ಥಿಕ ಕಾರ್ಯಸಾಧ್ಯತೆಯ ಬಗ್ಗೆ ಪರಿಶೀಲನೆ ಮತ್ತು ವಿಹಿತಾಚಾರಗಳನ್ನು ಪಾಲಿಸುವುದರಲ್ಲಿ ಸಮಯ ಹಿಡಿಯುತ್ತದೆ. ಮತ್ತು ಯಾವುದೇ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿಲ್ಲ.

ಶ್ರೀ ಎಚ್. ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಒಟ್ಟು 71 ರಿಗ್ ಬೋರ್‌ಗಳು ಇವೆ ಮತ್ತು 13 ರಿಪೇರಿಯಲ್ಲಿವೆ ಎಂದು ಹೇಳಿದ್ದಾರೆ. ಎಷ್ಟು ದಿವಸ, ಎಷ್ಟು ವರ್ಷದಿಂದ ಈ 13 ರಿಗ್ ಯಂತ್ರಗಳು ರಿಪೇರಿಯಲ್ಲಿವೆ? 1995-96ರಲ್ಲಿ 3035 ಬೋರ್‌ವೆಲ್‌ಗಳು ರಿಪೇರಿಯಲ್ಲಿವೆ. 1994-95 ರಲ್ಲಿ 2282 ರಿಪೇರಿಯಲ್ಲಿವೆ. 1993-94ರಲ್ಲಿ 2052 ರಿಪೇರಿಯಲ್ಲಿವೆ ಎಂದು ಹೇಳಿದ್ದೀರಿ. Nature of repair ಏನು? ಇವುಗಳು ಎಷ್ಟು ವರ್ಷಗಳಿಂದ ರಿಪೇರಿಯಲ್ಲಿವೆ? ಇದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುವುದಿಲ್ಲವೇ? ಏತಕ್ಕೋಸ್ಕರ ಈ ರಿಪೇರಿ ತಡವಾಗಿದೆ? ದಯವಿಟ್ಟು ಮಂತ್ರಿಗಳು ತಿಳಿಸುತ್ತಾರೆಯೆ?

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಕೊಳವೆಬಾವಿಗಳು ದುಸ್ಥಿತಿಯಲ್ಲಿ ಇರತಕ್ಕಂಥಾದ್ದು 1995-96ರಲ್ಲಿ 3035 ಎಂದು ಹೇಳಿದ್ದೇನೆ. ಅಂದರೆ ಇದು ಆಗಿಂದಾಗ್ಗೆ ಆಗುತ್ತದೆ. ಉಪಯೋಗ ಮಾಡತಕ್ಕಂಥ ಸಂದರ್ಭದಲ್ಲಿ ಚೈನ್ ಹರಿದುಹೋಗಿರುತ್ತದೆ, ರಾಡ್

ಮುರಿದುಹೋಗಿರುತ್ತದೆ. ಸಣ್ಣಪುಟ್ಟ ತೊಂದರೆಗಳು ಬರುತ್ತವೆ. ಇಂತಹ ಸಂದರ್ಭದಲ್ಲಿ ದುಸ್ಥಿತಿಯಲ್ಲಿರುವುದನ್ನು ನಾವು ಪೀರಿಯಾಡಿಕಲಿ ರಿಪೇರಿ ಮಾಡುತ್ತಲೇ ಇರುತ್ತೇವೆ. ಕೊಳವೆ ಬಾವಿಗಳ ವಿಚಾರದಲ್ಲಿ ರಿಗ್ ಮೆಶಿನ್ಸ್ ಬಗ್ಗೆ ಅವರು ಏನು ಕೇಳಿದ್ದಾರೆ, ಅದರಲ್ಲಿ 13 ದುಸ್ಥಿತಿಯಲ್ಲಿವೆ. ಅವೆಲ್ಲವೂ ಕೂಡ ವರ್ಷಾನುಗಟ್ಟಲೆ ಇಲ್ಲ. ಅವು ಆಗಿಂದಾಗೆ ಕೆಡುತ್ತವೆ. ಹಳೆ ಮೆಷಿನ್‌ಗಳನ್ನು ಹಾಕಿದ್ದರಿಂದ ಅವುಗಳನ್ನು ರಿಪೇರಿ ಮಾಡಬೇಕಾಗುತ್ತದೆ. ನಾನು ಚಿತ್ರದುರ್ಗದಲ್ಲಿ ಪರಿವೀಕ್ಷಣೆ ಮಾಡಿದಂಥ ಸಂದರ್ಭದಲ್ಲಿ ಮೂರು ರಿಗ್ ಮೆಷಿನ್ಸ್‌ನಲ್ಲಿ ಎರಡು ಕೆಟ್ಟಿದ್ದವು. ಸುಮಾರು ಮೂರು ತಿಂಗಳಿಂದ ಕೆಟ್ಟಿದ್ದವು. ಮತ್ತೊಂದನ್ನು ಕಳುಹಿಸಿಕೊಡಿ ಎಂದು ಹೇಳಿದಾಗ, ಅಲ್ಲಿ ಬೋರ್ ಪಾಯಿಂಟ್‌ನ್ನು ಸರೆಂಡರ್ ಮಾಡಿ ಬೇರೆಯವರಿಗೆ ಕೊಡುವಂಥ ವ್ಯವಸ್ಥೆ ಮಾಡಿಕೊಡಿ ಎಂದು ತಿಳಿಸಿದ್ದೇನೆ.

ಅಧ್ಯಕ್ಷರು:- ಹರಿಹರದ ಬಗ್ಗೆ ಹೇಳಿದ್ದೀರಿ ತಾನೆ?

ಶ್ರೀ ಎಚ್. ಶಿವಪ್ಪ:- ಅಧ್ಯಕ್ಷರೇ, ಇದು ಹರಿಹರದ ಪ್ರಶ್ನೆ ಅಲ್ಲ. ಸಾಮಾನ್ಯವಾಗಿ ಆಗತಕ್ಕಂಥ ತೊಂದರೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ತಾವು evasive reply ಕೊಟ್ಟಿರಿ. ಎಷ್ಟು ವರ್ಷಗಳಿಂದ ಇವು ರಿಪೇರಿಯಲ್ಲಿವೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ...

MR. SPEAKER:- He was very precise; he was not evasive. ವರ್ಷಾನುಗಟ್ಟಲೆ ರಿಪೇರಿಯಾಗದೇ ಇರುವುದು ಇಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಎಚ್. ಶಿವಪ್ಪ:- ಈ ಮೂರು ಸಾವಿರ ಬೋರ್‌ವೆಲ್‌ಗಳನ್ನು ಹಾಕಿರತಕ್ಕಂಥಾದ್ದು ರಿಪೇರಿ ಮಾಡದೇ ಇದ್ದರೆ ಎಷ್ಟು ತೊಂದರೆಯಾಗುತ್ತದೆ ಎಂಬ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಶಿವಪ್ಪನವರೇ, ತಾವು ವಕೀಲರು ಇದ್ದೀರಿ. ತಮ್ಮ ಪ್ರಶ್ನೆಗೆ ಸರ್ಕಾರ ಒದಗಿಸಿರುವ ಉತ್ತರವನ್ನು ತಾವು ನೋಡಿಕೊಳ್ಳಬೇಕು. 31-3-96 ಈ ದಿನಾಂಕದ ಹೊತ್ತಿಗೆ ಇಡೀ ರಾಜ್ಯದಲ್ಲಿ ದುಸ್ಥಿತಿಯಲ್ಲಿ ಕೆಟ್ಟು ರಿಪೇರಿ ಆಗದೇ ಇರತಕ್ಕಂಥ ಒಟ್ಟು ಬೋರ್‌ವೆಲ್‌ಗಳ ಸಂಖ್ಯೆ ಅದು. ರಾಜ್ಯದಲ್ಲಿ ಲಕ್ಷಾಂತರ ಬೋರ್‌ವೆಲ್‌ಗಳನ್ನು ಕೊರೆದಿರುವಾಗ ಅದು ಅಷ್ಟು ಇರುತ್ತದೆ. ಕೆಲವು blackish water ಬಂದಿರುತ್ತದೆ, ಕೆಲವು ರಿಪೇರಿ ಮಾಡುವುದಕ್ಕೆ ಆಗದೆ ಇರುವಂಥಾದ್ದು ಇರುತ್ತವೆ.

SRI. H. SHIVAPPA:- This is tolerable according to the opinion of the Hon'ble Speaker;

ಅಧ್ಯಕ್ಷರು:- ನೀವು ಸಪ್ಲಿಮೆಂಟರಿ ಹಾಕುವಾಗ ಒಂದೊಂದು ವರ್ಷದ್ದು ಲೆಕ್ಕಹಾಕಿ ಟೋಟ್‌ಲ್ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ; This is the final accumulated figure, if I am right. You must also understand....

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರು ಹೇಳಿದಂತೆ, ಒಂದು ಲಕ್ಷ ನಲವತ್ತೇಳು ಸಾವಿರ ಕೊಳವೆಬಾವಿಗಳು ಈ ದಿವಸದವರೆಗೆ ಇರುವಾಗ ಮೂರು ಸಾವಿರ ಬಾವಿಗಳು ದುಸ್ಥಿತಿಯಲ್ಲಿವೆ.

ಶ್ರೀ ಎಚ್. ಶಿವಪ್ಪ:- ಇವುಗಳನ್ನು ಯಾವಾಗ ರಿಪೇರಿ ಮಾಡುತ್ತೀರಿ? ಎಷ್ಟು ವರ್ಷಗಳಿಂದ ಇವು ರಿಪೇರಿಯಲ್ಲಿವೆ ಎಂಬುದನ್ನು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್:- ಈಗಾಗಲೇ ಮಾನ್ಯ ಅಧ್ಯಕ್ಷರು ಸ್ಪಷ್ಟೀಕರಣ ಕೊಟ್ಟಂತೆ ಕೆಲವು ಕೊಳವೆಬಾವಿಗಳು ದುಸ್ಥಿತಿಯಲ್ಲಿರುತ್ತವೆ, ಕೆಲವಕ್ಕೆ ಕಲ್ಲು ಹಾಕಿ ಮುಚ್ಚಿರುತ್ತಾರೆ...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೊಳವೆ ಬಾವಿಗಳು ಯಾವ ರೀತಿ ಕೆಟ್ಟಿವೆ ಎಂಬ ಬಗ್ಗೆ ಹೇಳಿದರು. ಆದರೆ ಸರ್ಕಾರ ಯಾವರೀತಿ ಕಾರ್ಯಕ್ರಮದ ಮೂಲಕ ಈ ಕೆಲಸವನ್ನು ಸುಲಲಿತವಾಗಿ ಮಾಡಬಹುದು? ಒಂದೂವರೆ ಲಕ್ಷ್ ಬೋರ್‌ವೆಲ್‌ಗಳಲ್ಲಿ ಮೂರು ಸಾವಿರ ಬಾವಿಗಳು ರಿಪೇರಿಗೆ ಬರುತ್ತವೆ. ಆದರೆ ಈ ರಿಪೇರಿ ಕೆಲಸವನ್ನು ಯಾವರೀತಿ ಮಾಡಬಹುದು ಎಂದರೆ ಎಲ್ಲಾ ಪಂಚಾಯತಿಯಿಂದ ಒಬ್ಬೊಬ್ಬರನ್ನು ಕರೆದು ಅವರಿಗೆ ತರಬೇತಿ ಕೊಡುವುದರ ಮೂಲಕ ಮತ್ತು ತರಬೇತಿ ಕೊಟ್ಟು ಪದಾರ್ಥಗಳನ್ನು ಪಂಚಾಯತಿಗೆ ಸರಬರಾಜು ಮಾಡುವುದರ ಮೂಲಕ ಸಮಸ್ಯೆಗಳನ್ನು ಸರಳೀಕರಣಗೊಳಿಸಬಹುದು. ಎರಡನೇಯದು, ರಿಗ್‌ಬೋರ್ ಕೊಟ್ಟು ಒತ್ತಿ ಒತ್ತಿ ನೀರು ತೆಗೆದುಕೊಂಡು ಹೋಗುವುದರ ಮೂಲಕ ಮೆಯೆಂಟನೆನ್ಸ್ ಎಷ್ಟು ಖರ್ಚಾಗುತ್ತದೆ? ಮಿನಿವಾಟರ್ ಸಪ್ಲೈಗೆ ಎಷ್ಟು ಖರ್ಚಾಗುತ್ತಿದೆ? ಮೇಜರ್ ವಾಟರ್ ಸಪ್ಲೈಗೆ ಎಷ್ಟು ಖರ್ಚಾಗುತ್ತಿದೆ ಎಂಬುದನ್ನೆಲ್ಲಾ ನೋಡಿ ಎಲ್ಲವನ್ನೂ ಮಿನಿವಾಟರ್ ಸಪ್ಲೈ ಮೂಲಕ ಮಾಡಿಕೊಟ್ಟರೆ ನಿಮಗೆ ಖರ್ಚು ಮಾಡುವಂಥಾದ್ದು ಕಡಿಮೆಯಾಗುತ್ತದೆ. ದಯವಿಟ್ಟು ಎಲ್ಲಾ ಪಂಚಾಯತಿಗೂ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ರಿಪೇರಿ ವ್ಯವಸ್ಥೆಗೆ ಅನುಕೂಲ ಮಾಡುವಂಥ ತರಬೇತಿ ಕೆಲಸವನ್ನು ಮಾಡಿದರೆ ಈ ಕಾರ್ಯಕ್ರಮ ಸುಲಭವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದಂತೆ ಪ್ರತಿ ಗ್ರಾಮ ಪಂಚಾಯತಿಯವರೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಕಾನೂನಿನಲ್ಲಿದೆ. ಆದರೆ ಅನೇಕ ಗ್ರಾಮ ಪಂಚಾಯತಿಯವರು ತಮ್ಮಲ್ಲಿರುವಂಥ ಸಂಪನ್ಮೂಲಗಳಿಂದ ಇಂತಹ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಜಿಲ್ಲಾ ಪಂಚಾಯತ್‌ನಿಂದ್ ಮಾಡಿಕೊಡಬೇಕೆಂದು ಅವರ ಬೇಡಿಕೆ ಇದೆ. ಜಿಲ್ಲಾ ಪಂಚಾಯತ್‌ನವರು ಅದನ್ನು ಮಾಡುತ್ತಿದ್ದಾರೆ. ಕೊಳವೆಬಾವಿ ಹಾಕಿ ಸ್ಥಳೀಯ ಸಮಸ್ಯೆಗಳಿಗೆ ಅನುಗುಣವಾಗಿ ಕೈಪಂಪು ಅಳವಡಿಸಿದರೆ 35 ರಿಂದ 50 ಸಾವಿರವರಗೆ ಖರ್ಚು ಬರುತ್ತದೆ. ಯಾವುದಾದರೂ ಕಿರು ನೀರು ಸರಬರಾಜು ಯೋಜನೆ ಹಾಕುವುದಾದರೆ ಒಂದೂವರೆ ಲಕ್ಷ ರೂಪಾಯಿಗಳಷ್ಟು ಅಂದಾಜು ಆಗುತ್ತದೆ. ಅದನ್ನು ಓವರ್‌ಹೆಡ್ ಟ್ಯಾಂಕ್ ಮೂಲಕವಾಗಿ ನೀರು ಕೊಡುಬೇಕಾದಂಥ ಪರಿಸ್ಥಿತಿ ಇದ್ದರೆ ಒಂದು ಸಾಧಾರಣ ಮಧ್ಯಮ ತರಗತಿಯ ಗ್ರಾಮಗಳಾದರೆ ಸುಮಾರು ನಾಲ್ಕು ಲಕ್ಷ ರೂಪಾಯಿ ಆಗುತ್ತದೆ. ಪ್ರತಿ ಗ್ರಾಮಪಂಚಾಯತಿ ಯೋಜನೆಯಲ್ಲಿ Trisome Scheme ಮೂಲಕ ಅವರಿಗೆ ತರಬೇತಿ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಸ್ಯಾಂಡ್‌ಬೈ ಪಂಪ್‌ಸೆಟ್‌ಗಳನ್ನು

ತಾಲ್ಲೂಕು ಪಂಚಾಯತ್‌ನವರು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಕೈ ಪಂಪುಗಳಿಗೆ ಬೇಕಾಗಿರತಕ್ಕಂಥ ಇನ್ನೂರು-ಮೂನ್ನೂರು ರೂಪಾಯಿಗಳ ಟೂಲ್‌ಕಿಟ್ ಇಡಬೇಕು ಎಂದೂ ಕೂಡ ಹೇಳಿದ್ದೇವೆ. ಈ ರೀತಿಯಾಗಿ ಅದು ಒಂದು ಮೊಬೈಲ್ ಯೂನಿಟ್ ಇರುತ್ತದೆ. ಅದು ಎಲ್ಲಾ ಊರುಗಳಿಗೆ, ತಿಂಗಳಲ್ಲಿ ಯಾವ್ಯಾವ ಊರುಗಳಿಗೆ ಬರುತ್ತದೆ ಎಂದು ಹೇಳಿ, ಆ ಎಲ್ಲಾ ಬಾವಿಗಳನ್ನು ದುರಸ್ತಿ ಮಾಡತಕ್ಕಂಥ ಕೆಲಸವನ್ನು ಈಗ ಸರಳೀಕೃತಮಾಡಿ ಕೆಲಸ ಮಾಡುತ್ತಿದ್ದೇವೆ.

ಅಧ್ಯಕ್ಷರು:- ನಾನು ಈಗ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ಕರೆಯುತ್ತೇನೆ. ಅವರು ಬಹಳ ಹಿಂದೆ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇಂಡಿಪೆಂಡೆಂಟ್ ಏಜೆನ್ಸಿ ಮಾಡಲಿ. ಎಲ್ಲಿ ಕಂಪ್ಲೇಂಟ್ ಬರುತ್ತದೆ, ಅಲ್ಲಿ ತಕ್ಷಣ ರಿಪೇರಿ ಆಗುವಂಥ ವ್ಯವಸ್ಥೆಯಾಗಬೇಕು. ಏಕೆಂದರೆ ನನ್ನ ಕ್ಷೇತ್ರದಲ್ಲೇ ಕನಿಷ್ಟ ಆರುಸಾವಿರ ರಿಪೇರಿಯಾಗದೇ ಇರುವುದಿದೆ. ಇಂತಹ ಬೇಕಾದಷ್ಟು ಉದಾಹರಣೆಗಳು ಇವೆ. ಆದ್ದರಿಂದ ದೂರು ಬಂದ ತಕ್ಷಣ ಅದಕ್ಕೆ ಗಮನ ಕೊಡಬೇಕು. ಇಲ್ಲದಿದ್ದರೆ ಕೊಳವೆಬಾವಿ ಕೆಟ್ಟು ಜನರಿಗೆ ಬಹಳ ತೊಂದರೆಯಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ.

MR. SPEAKER:- You can examine that proposal.

ಶ್ರೀ ಎಂ.ಪಿ. ಪ್ರಕಾಶ್:- ಕೊಳವೆಬಾವಿ 6-6- ತಿಂಗಳು ಕೆಟ್ಟಿರತಕ್ಕಂಥ ಉದಾಹರಣೆಗಳು ನನ್ನ ಗಮನಕ್ಕೆ ಬಂದಿಲ್ಲ. ಅವರ ಕ್ಷೇತ್ರದಲ್ಲಿ ಇಡೀ ದಿವಸ, ಅಧಿಕಾರಿಗಳ ಜೊತೆ ಇದ್ದೆವು. ಅಂಥಾದ್ದು ಇದ್ದರೆ, ತತ್‌ಕ್ಷಣದಲ್ಲೇ ಆದೇಶ ಕೊಡುತ್ತಿದ್ದೆ. ಅದೇನೇ ಇರಲಿ, ಪ್ರತಿ ತಿಂಗಳಲ್ಲಿ ಮಾಡಬೇಕಾದಂಥಾದ್ದು ಇದೆ. ಆಲಕ್ಷ್ಯದಿಂದಾಗಿದ್ದರೆ, ತಾವು ಆ ವಿಚಾರವನ್ನು ತಿಳಿಸಿ, ಈ ಕೂಡಲೇ ನಾನು ಆದೇಶಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಗ್ರಾಮಪಂಚಾಯ್ತಿ ಬಗ್ಗೆ ವಸ್ತು ಸ್ಥಿತಿ ಏನೆಂದರೆ, ಮಾನ್ಯ ಶಿವಪ್ಪನವರ ಪ್ರಶ್ನೆ, ಅನೇಕ ಕಡೆ ಕೆಟ್ಟಿದೆ, ಬೇಗ ರಿಪೇರಿಯಾಗಬೇಕೆಂಬುದು ಮೂಲಭೂತವಾದ ಪ್ರಶ್ನೆ. ತಾವು ತತ್ವದ ಪ್ರಶ್ನೆ ಹೇಳುತ್ತಾ ಇದ್ದೀರಿ. ಹೀಗಿದೆ, ಹಾಗಿದೆ ಎಂದು ಎಲ್ಲಾ ಕಥೆ ಹೇಳಿಕೊಂಡು ಬಂದಿರಿ. ಗ್ರಾಮಪಂಚಾಯ್ತಿಗಳಿಗೆ ನೀವು ಸರಿಯಾಗಿ ಹಣ ಕೊಡುತ್ತಾ ಇಲ್ಲ. ರಿಪೇರಿ ವಸ್ತುಗಳನ್ನು ಕೊಡುತ್ತಾ ಇಲ್ಲ ಅದರ ಬಗ್ಗೆ ಸರ್ಕಾರ ತೀವ್ರವಾದ ಗಮನ ಹರಿಸುತ್ತದೆಯೆ? ಅನೇಕ ಗ್ರಾಮಪಂಚಾಯ್ತಿಗಳು ಹಣವಿಲ್ಲದೇ ನಾವು ರಿಪೇರಿ ಮಾಡುವುದಕ್ಕಾಗುವುದಿಲ್ಲ, ನಮ್ಮ ಕೈಲಿ ತೊಂದರೆಯಾಗಿದೆ ಎಂದು, ಕೆಲವು ಗ್ರಾಮಪಂಚಾಯ್ತಿ ಅಧ್ಯಕ್ಷರುಗಳು ರಾಜೀನಾಮೆ ಕೊಡುತ್ತಿದ್ದಾರೆ ಆ ಜನಗಳ ಒಂದು ಒತ್ತಡವನ್ನು ತಡೆಯಲಾರದೆ ರಾಜೀನಾಮೆ ಕೊಡುತ್ತಿದ್ದಾರೆ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ನೀವು ಒಂದು ಕಡೆ ವಿಕೇಂದ್ರೀಕರಣ ಎಂದು ಹೇಳುತ್ತೀರಿ ಮತ್ತೊಂದು ಕಡೆ ಗ್ರಾಮಪಂಚಾಯ್ತಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳುತ್ತೀರಿ. ಒಂದು ಕೊಳವೆಬಾವಿ ರಿಪೇರಿಗೆ ಅವರು ಹಣ ಕೊಡುವುದಿಲ್ಲವೆಂದು ಹೇಳಿದರೆ, ಎಲ್ಲಿ ರಿಪೇರಿಯಾಗಬೇಕೆಂಬುದನ್ನು ತಾವು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ವಸ್ತು ಸ್ಥಿತಿ ಬೇರೆ ಇದೆ. ಪ್ರತಿಯೊಂದು ಗ್ರಾಮಪಂಚಾಯ್ತಿಗೂ ಒಂದು ಕಾಲು ಲಕ್ಷ ರೂ.ಗಳ ಅನುದಾನ ಕೊಡುತ್ತೇವೆ. ಅದರಲ್ಲಿ ನಿರ್ದಿಷ್ಟವಾಗಿ ಇಂತಹ ವಿಚಾರಗಳಿಗೆ, ಇದನ್ನು ಉಪಯೋಗ ಮಾಡಬೇಕೆಂದು ಇದೆ. ನಾವು ಪ್ರತಿ ಗ್ರಾಮಪಂಚಾಯ್ತಿಗೂ ಹಣ ಕೊಡುತ್ತಾ ಇದ್ದೇವೆ. ಆದ್ದರಿಂದ, ಆ ಗ್ರಾಮಪಂಚಾಯ್ತಿಯವರು ದುರಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ, ಜಿಲ್ಲಾ ಪಂಚಾಯ್ತಿಯವರು ಮಾಡಲಿ ಎಂದು ಹೇಳಿದ್ದಾರೆ. ಈಗ ಜಿಲ್ಲಾ ಪಂಚಾಯ್ತಿಯವರ ಕಡೆಯಿಂದ ಮಾಡಿಸುತ್ತಾ ಇದ್ದೇವೆ. ಹೆಚ್ಚುವರಿ ಹಣ ಬೇಕಾಗಿದ್ದರೆ, ಅದನ್ನೂ ಕೊಡಲಿಕ್ಕೆ ತಯಾರಿದ್ದೇವೆ. ಜಿಲ್ಲಾ ಪಂಚಾಯ್ತಿಗೆ ಪ್ರತ್ಯೇಕವಾದಂಥ ಹಣ ಇದೆ. 2 ಕೋಟಿ 61 ಲಕ್ಷ ರೂಪಾಯಿಗಳನ್ನು 1996-97ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿಯೇ ನಾವು ಖರ್ಚು ಮಾಡಿದ್ದೇವೆ. ಆದ್ದರಿಂದ, ಈ ವಿಚಾರದಲ್ಲಿ ಯಾವುದೇ ರೀತಿಯ ತೊಂದರೆಗಳೂ ಇಲ್ಲ. ಕೆಲವು ಕಡೆಗಳಲ್ಲಿ ಅನ್ಯ ಕಾರಣಗಳಿಂದ ತೊಂದರೆಯಾಗಿರಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:- ಟೈಮ್ ಇಲ್ಲ, ಇನ್ನೂ 8 ಪ್ರಶ್ನೆಗಳು ಇವೆ, ಮುಂದಿನ ಪ್ರಶ್ನೆಗೆ ಹೋಗೋಣ, ದಯಮಾಡಿ ಸಹಕರಿಸಬೇಕು. ನಿಮ್ಮನ್ನು ಮೊದಲನೇ ಬೆಂಚಿಗೆ ತರುವುದೇ ಒಂದು ದೊಡ್ಡ ಗೌರವ.

ವಿಷಯ:- ಸವಣೂರು ತಾಲ್ಲೂಕಿನಲ್ಲಿ 1995-96 ಹಾಗೂ 1996-97ನೇ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳು.

8(94)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಸವಣೂರು ತಾಲ್ಲೂಕು ಪಂಚಾಯಿತಿಯ 1995-96 ಮತ್ತು 1996-97ನೇ ಹಣಕಾಸಿನ ವರ್ಷದಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು. ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ;

ಆ) ಈ ಕಾಮಗಾರಿಗಳಿಗಾಗಿ ಈವರೆಗೂ ಖರ್ಚು ಮಾಡಲಾದ ಹಣದ ವಿವರಗಳನ್ನು ಒದಗಿಸುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):-